## ಎರಡನೇ ಹೆಂಡ್ತಿನ್ನ ಬಿಟ್ಟೆ



ಪತ್ನಿ ಸಮೇತನಾಗಿ ಕಾಶಿಯಾತ್ರೆಗೆ ಹೋಗಿ ಬಂದ ನಂತರ ಮಿತ್ರ ಶೀನ ತನ್ನ ಮನೆಯಲ್ಲಿ ಸಮಾರಾಧನೆ ಏರ್ಪಡಿಸಿದ್ದ. ಭೋಜನ ಮಾಡಿ ಎಲ್ಲರೂ ತಾಂಬೂಲಕ್ಕೆ ಅಣಿಯಾಗುತ್ತಿದ್ದೆವು. ಆಗ ನನ್ನವಳು ಶೀನನ್ನು ಕುರಿತು, 'ಶೀನಣ್ಣ ಕಾಶಿಗೆ ಹೋಗಿ ಏನು ಬಿಟ್ಟು ಬಂದ್ರಿ?' ಎಂದು ಕೇಳಿದಳು. ಅದಕ್ಕವನು 'ನನ್ನ ಎರಡನೇ ಹೆಂಡ್ತಿನ' ಎಂದು ಉತ್ತರಿಸಿದ್ದೇ ತಡ, ಅಲ್ಲಿನ ವಾತಾವರಣ ಬಿಗಡಾಯಿಸಿತು. ಅದನ್ನು ಕೇಳಿಸಿಕೊಂಡ ಶೀನನ ಹೆಂಡತಿ ಶೀಲಾ ಕೈಯಲ್ಲಿದ್ದ ತಾಂಬೂಲದ ತಟ್ಟೆಯನ್ನು ಟೀಪಾಯ್ ಮೇಲೆ ಕುಕ್ಕಿ, 'ಅಲ್ಲೆಲ್ಲಾ ನಿಮ್ಮ ಹಿಂದೆ ನಾನೂ ಇದ್ನಲ್ರಿ... ಯಾವಾಗ್ರಿ ಆಕಿನ್ನ ಜೊತೆಗೆ ಕರಕೊಂಡು ಬಂದ್ರಿ?' ಎಂದು ಕೇಳಿದಳು. 'ಇಲ್ಲಿಂದ್ಲೇ ಕರಕೊಂಡು ಬಂದೆ... ಅದೇ ನನ್ನ ಮೊಬೈಲ್... ನೀನೇ ಹೇಳ್ತಿದ್ದಿಯಲ್ಲ, ಅದು ನನ್ನ ಎರಡನೇ ಹೆಂಡತಿ ಇದ್ದಂಗ ಅಂತ, ಅದನ್ನ ಅಲ್ಲೇ ಬಿಟ್ಟುಬಂದೆ' ಎಂದ ಶೀನ. ಶೀಲಾ ನಕ್ಕಳು. ವಾತಾವರಣ ಮತ್ತೆ ತಿಳಿಯಾಯಿತು.

**ಅರವಿಂದ ಜೋಷಿ**




## ಕಡಿಮೆ ರಜೆಯ ಕ್ಯಾಲೆಂಡರ್!

ನಮ್ಮ ಅಳಿಯ ಹೊಸ ಕ್ಯಾಲೆಂಡರ್ ನೋಡುತ್ತ, 'ಈ ವರ್ಷ ಹೆಚ್ಚಾಗಿ ಎಲ್ಲಾ ರಜೆಗಳೂ ಶನಿವಾರ–ಭಾನುವಾರವೇ ಬಂದಿವೆ. ಹೆಚ್ಚು ರಜೆಗಳು ಸಿಗುವುದಿಲ್ಲ' ಎನ್ನುತ್ತಿದ್ದ. ಅಲ್ಲೇ ಆಟವಾಡುತ್ತಿದ್ದ ನಮ್ಮ ಮೊಮ್ಮಗಳು ಸಮನ್ವಿತಾ, ಅಪ್ಪನಿಗೆ ಸಮಾಧಾನ ಮಾಡುವ ಧಾಟಿಯಲ್ಲಿ, 'ಅಂಗಡಿಯವನಿಗೆ ಈ ಕ್ಯಾಲೆಂಡರ್ ವಾಪಸ್ಸು ಕೊಟ್ಟು ಜಾಸ್ತಿ ರಜೆ ಇರುವ ಬೇರೆ ಕ್ಯಾಲೆಂಡರ್ ತರೋಣ ಸುಮ್ನಿರಪ್ಪ...' ಎಂದಾಗ ಅಳಿಯನ ಮುಖದ ಮೇಲೆ ಮುಗುಳ್ನಗೆ ತೇಲಿತು.

**ಶಶಿರೇಖಾ ನಾಗೇಂದ್ರ**



ಚಿತ್ರಗಳು: ಗಣೇಶ ಆಚಾರ್ಯ